# ಕಾರಂತರು ಆಶೀರ್ವದಿಸಿದ್ದು ನೆನೆವುದೆನ್ನ ಮನ..!

ಸುಮಧುರ ರಾಗ 'ಶುದ್ಧಸಾರಂಗ'ದಲ್ಲಿ ನಾನು ಹಾಡಿದ ಪ್ರಾರ್ಥನಾ ಗೀತೆಯ ಬಳಿಕ ಮೇರು ಸಾಹಿತಿ ಡಾ.ಶಿವರಾಮ ಕಾರಂತರು ಹರಸಿದ್ದು, ಸಂಗೀತ ಗುರುಗಳಾದ ಪಂ.ಚಂದ್ರಶೇಖರ ಪುರಾಣಿಕ ಮಠ ಅವರು ನನ್ನ ಹಾಡನ್ನು ಮೆಚ್ಚಿದ್ದು.. ಎರಡೂ ಜೀವನದಲ್ಲಿ ಅವಿಸ್ಮರಣೀಯ ಆನಂದ, ಪುಳಕ ಕೊಡುವ ಸಂಗತಿಗಳು..!

■ ಗೀತಾ ಆಲೂರ, ಧಾರವಾಡ




ಕನ್ನಡದ ಹಿರಿಯ ಕವಿಗಳು, ಸಾಹಿತಿಗಳು ತಮ್ಮ ಬರವಣಿಗೆ ಮೂಲಕ ಸಮಾಜಕ್ಕೆ ನೀಡಿದ ಸಂದೇಶಗಳು ಹಿರಿಯ ಕಿರಿಯರೆಲ್ಲರಿಗೂ ದಾರಿದೀಪ. ಬದುಕಿನ ಅನುಭವಗಳನ್ನು, ಆಶಯಗಳನ್ನು ಅತ್ಯುತ್ತಮ ಶೈಲಿ, ಭಾಷೆಯ ಮೂಲಕ ಪ್ರಸ್ತುತಪಡಿಸಿ ಎಲ್ಲರಿಗೂ ಮನಸ್ಸಿಗೆ ಸಂತೋಷ, ನೆಮ್ಮದಿ ನೀಡುವ ಬರಹಗಳು ಎಂದಿಗೂ ನಮಗೆ ಆದರ್ಶವೇ ಆಗಿದೆ. ಜ್ಞಾನಪೀಠ ಪ್ರಶಸ್ತಿ ಪಡೆದ ಕವಿ, ಸಾಹಿತಿಗಳನ್ನು ಎದುರಿಗೆ ಕಂಡರೂ ಸಾಕು ರೋಮಾಂಚನವಾಗುತ್ತದೆ, ಖುಷಿಯಾಗುತ್ತದೆ, ಪುಳಕಗೊಳ್ಳುವಂತಾಗುತ್ತದೆ ಮನಸ್ಸು!.

ಇಂಥದ್ದರಲ್ಲಿ ಬಹುದೊಡ್ಡ ಸಾಹಿತಿಗಳು ಅತ್ಯಂತ ಸನಿಹದಿಂದ ಹರಸಿ ಆಶೀರ್ವದಿಸಿದರೆ..? ಇದು ಬದುಕಿನಲ್ಲಿ ನಿಜಕ್ಕೂ ಮರೆಯಲಾರದ ನೆನಪಾಗಿ ಉಳಿಯುತ್ತದೆ. ನನಗೂ ಮೇರು ಸಾಹಿತಿ ಡಾ.ಶಿವರಾಮ

ಕಾರಂತರಿಂದ ಆಶೀರ್ವಾದ ಪಡೆಯುವ ಸೌಭಾಗ್ಯ ಒದಗಿಬಂದಿತ್ತು. ನಾನು ಧನ್ಯನಾದೆ ಎಂಬ ಭಾವವೂ ಉಂಟಾಗಿತ್ತು ಅಂದು.

ಅದು ಜನವರಿ ತಿಂಗಳು 1996ನೇ ಇಸವಿ. ಅಂದು ಧಾರವಾಡದಲ್ಲಿ ಕನ್ನಡದ ಕೊಲಂಬಸ್, ಹಿರಿಯ ಸಂಶೋಧಕರಾದ ಡಾ. ಶಂ.ಬಾ. ಜೋಶಿಯವರ ಜನ್ಮ ಶತಮಾನೋತ್ಸವದ ಸಂದರ್ಭ. ನನ್ನ ಪತಿ ಡಾ.ದೀಪಕ ಆಲೂರ ಆ ಸಮಾರಂಭದ ಕಾರ್ಯದರ್ಶಿ ಆಗಿದ್ದರು. ಧಾರವಾಡ ವಿದ್ಯಾವರ್ಧಕ ಸಂಘದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶಂ.ಬಾ. ಜೋಶಿಯವರ ಮಗಳು ವಿಮಲಾ ತಾಯಿಯವರು, ನಮ್ಮವರಿಗೆ 'ನಿನ್ನ ಹೆಂಡತಿ ಹಾಡು ಹಾಡತಾಳಲ್ಲ ಅಕಿಗೆ ಪ್ರಾರ್ಥನೆ ಹಾಡಲು ಹೇಳು' ಎಂದರಂತೆ. ಅದರಂತೆ ಅವರು ನನಗೆ ಪ್ರಾರ್ಥನೆ ತಯಾರಿ ಮಾಡಲು ಹೇಳಿದರು.

ನನ್ನ ಸಂಗೀತದ ಗುರುಗಳು ಪಂಡಿತ್ ಚಂದ್ರಶೇಖರ ಪುರಾಣಿಕ ಮಠ ಅವರು ನನಗೆ ಕುವೆಂಪುರವರ ಪ್ರಾರ್ಥನಾ ಗೀತೆ, 'ಮಣಿಯ ಲೆನ್ನ ಶಿರವು ನಿನ್ನ ಚರಣಧೂಳಿ ತಲದಲಿ....' (ರಾಗ: ಶುದ್ಧ ಸಾರಂಗದಲ್ಲಿ) ಹೊಸತಾಗಿ ಕಲಿಸಿದ್ದರು. ಅಂದು ವೇದಿಕೆ ಮೇಲೆ ಶಿವರಾಮ ಕಾರಂತರು, ನ. ವಜ್ರಕುಮಾರರು, ಕೀರ್ತಿನಾಥ ಕುರ್ತಕೋಟಿ ಮುಂತಾದ ದಿಗ್ಗಜರ ಜತೆಗೆ ತುಂಬಿದ ಸಭಾಂಗಣದಲ್ಲಿ ಗುರುಗಳು ಹೇಳಿಕೊಟ್ಟ ಪ್ರಾರ್ಥನಾ ಗೀತೆಯನ್ನು ಹಿತಮಿತವಾದ ಆಲಾಪ, ಸುಮಧುರ ಸ್ವರಸಂಯೋಜನೆಯೊಂದಿಗೆ ಹಾಡಿದೆ.

ಕಾರ್ಯಕ್ರಮದ ನಂತರ ನನ್ನವರು ಕಾರಂತರ ಹತ್ತಿರ ನನ್ನನ್ನು ಕರೆದುಕೊಂಡು ಹೋದರು. ಅವರಿಗೆ ಶಿರಬಾಗಿ ನಮಸ್ಕರಿಸಿದೆ. ಅವರು 'ನಿನ್ನ ಕಂಠದಲ್ಲಿ ಮಾಧುರ್ಯವಿದೆ, ಸಂಗೀತದಲ್ಲಿ ಸಾಧನೆ ಮಾಡು' ಎಂದು ಹರಸಿದರು. ಒಂದು ಕ್ಷಣ ರೋಮಾಂಚನವಾಯಿತು. ಅಂತಹ ಮೇರು ಚೇತನದಿಂದ ನನಗೆ ಆಶೀರ್ವಾದ! ಅಬ್ಬಾ, ಎಂಥಾ ಸೌಭಾಗ್ಯ ನನ್ನದು ಎನಿಸಿತ್ತು.

ಮರುದಿನ ಸಂಗೀತ ಪಾಠಕ್ಕೆ ಹೋದಾಗ ಗುರುಗಳು ತಾವಾಗಿಯೇ 'ನಿನ್ನೆ ಪ್ರಾರ್ಥನೆ ಚೆನ್ನಾಗಿ ಆಯಿತು' ಎಂದರು. 'ಗುರುಗಳೇ ನೀವೂ ಕಾರ್ಯಕ್ರಮಕ್ಕೆ ಬಂದಿದ್ದಿರಾ?' ಎಂದು ಕೇಳಿದೆ. ಆಗ ಅವರು 'ರೇಡಿಯೋದಲ್ಲಿ ಇಂದು ಕಾರ್ಯಕ್ರಮದ ವರದಿ ಹೇಳುವಾಗ ಹಿಂದೆ ಹಿನ್ನೆಲೆಯಾಗಿ ಪೂರ್ತಿಯಾಗಿ ಪ್ರಾರ್ಥನೆ ಗೀತೆಯನ್ನು ಹಾಕಿದ್ದರು, ಅದನ್ನು ಕೇಳಿದೆ' ಎಂದರು.

ಹಿರಿಯ ಚೇತನದ ಚೆನ್ನುಡಿ, ಸಂಗೀತ ಗುರುಗಳ ಶುಭನುಡಿ.. ಎರಡನ್ನೂ ನೆನೆಸಿಕೊಂಡಾಗ ಈಗಲೂ ಮನಸ್ಸು ಗರಿಗೆದರಿ ಕುಣಿಯುತ್ತದೆ. ಇಂತಹ ದಿವ್ಯ ಚೇತನರ ಆಶೀರ್ವಾದದಿಂದಲೇ ಇರಬಹುದು. ಈಗಲೂ ಸಂಗೀತದ ಸಾಧನೆಯಲ್ಲಿ ತೊಡಗಿಕೊಂಡಿದ್ದೇನೆ. ಮನಸ್ಸಿಗೆ ಅವಿಸ್ಮರಣೀಯ ಆನಂದ ಅನುಭವಿಸುತ್ತಿದ್ದೇನೆ. ■